ಗೌರವಾನ್ವಿತ ಮುಖ್ಯ ಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನ ಸೌಧ

ಬೆಂಗಳೂರು

ಮಾನ್ಯರೇ,

ಜ್ಞಾನ ಭಾರತಿ ಪುಣ್ಯಧಾಮವಾಗಿರುವುದು ನಮ್ಮೆಲ್ಲರ ಸುಕೃತ. ಬೆಂಗಳೂರು ವಿಶ್ವ ವಿದ್ಯಾಲಯದ ಆವರಣದ ಬಯೋ ಪಾರ್ಕ್ ಆಮ್ಲಜನಕದ ಕಣಜವಾಗಿ, ಇಂಗಾಲ ಹೀರಿಕೊಳ್ಳುವ ಕೆಲಸ ಮಾಡುತ್ತಿದೆ. ನೀರಿನ ಆಸರೆಯೂ ಹಾಗೂ ಅಂತರ್ಜಲ ಮರುಪೂರಣ ಕೇಂದ್ರವೂ ಆಗಿದ್ದು ಬೆಂಗಳೂರಿಗರ ಸೌಭಾಗ್ಯ. ಹೈಕೋರ್ಟ್ ನಿರೀಕೆಯಂತೆ ಇಕೋತೆರಪಿ ಕಾರ್ಯಕ್ರಮ ಡಾ.ಯಲ್ಲಪ್ಪ ರೆಡ್ಡಿಯವರಿಂದ ನಡೆಯುತ್ತಾ ವಿಶೇಷ ಚೇತನ ಮಕ್ಕಳ ಆಶಾದೀಪವಾಗಿದೆ.

ಜ್ಞಾನ ಭಾರತಿಯಲ್ಲಿ ಲಕ್ಷಾಂತರ ಮರಗಳನ್ನು ಬೆಳೆಸಲು ಸ್ವಾಟ್, ಗ್ರೀನ್ಸ್ ಆರ್ಮಿ ಫೋರ್ಸ್, ಮಿಡಿತ ಫೌಂಡೇಶನ್, ಜೀವನ್ಮುಕ್ತಿ, ಅದಮ್ಯ ಚೇತನ, ನೆರವು, ಯೂತ್ ಫಾರ್ ಸೇವಾ ಹೀಗೆ ಹತ್ತು ಹಲವಾರು ಸಂಘ ಸಂಸ್ಥೆಗಳು ಜತೆಗೂಡಿ ಎರಡು ದಶಕಗಳಿಂದ ನಿರ್ಮಾಣವಾಗಿದೆ ಜೈವಿಕ ಅರಣ್ಯ (Natural indigenous diversified Forest). ಮಾನ್ಯ ಯಲ್ಲಪ್ಪ ರೆಡ್ಡಿಯವರು ಆರಂಭಿಸಿದ್ದನ್ನು ಪ್ರಾ. ಟಿ.ಜೆ.ರೇಣುಕಾ ಪ್ರಸಾದ್ ರವರು ಮುಂದುವರಿಸಿಕೊಂಡು ಹೋಗಿದ್ದಾರೆ. ನೂರಾರು ಎಕರೆ ನಗರದಲ್ಲಿ ಅತಿ ದೊಡ್ಡ ಜೈವಿಕ ವೈವಿಧ್ಯ ವನ ಆಗಿದೆ. ನೂರಾರು ಜಾತಿಯ ಪಕ್ಷಿಗಳು ಹಾಗೂ ದುಂಬಿಗಳು ತುಂಬಿಕೊಳ್ಳುತ್ತಿರುವುದೇ ಸಾಕ್ಷಿ. ಈಗ ಇದನ್ನು ಕಾಂಕ್ರೀಟ್ ಕಾಡು ಮಾಡಲು ಹವಣಿಸುತ್ತಿದ್ದಾರೆ. ಪಂಚವಟಿ ಹಾಗೂ ಪಂಚವಲ್ಕಲದಲ್ಲಿ ಆಲದ ಮರಗಳು ತುಂಬಿವೆ. ಎರಡು ಕ್ರಿಷ್ಣ ಆಲ (ficus Krishnae) ಇರುವುದೂ ವಿಶೇಷ. ಭಾರತದ ವಿಶ್ವವಿದ್ಯಾಲಯಗಳಲ್ಲಿಯೇ ಮೊದಲಾಗಿದೆ ಬಯೋಡೈವರ್ಸಿಟಿ ಪಾರ್ಕ್. ಹೈಕೋರ್ಟ್ ನಿರೀಕ್ಷೆಯಂತೆ ಜಿಯೋ ಪಾರ್ಕ್ ಅಭಿವೃದ್ಧಿಯಾಗುತ್ತಿದೆ. ಕಟ್ಟೆ, ಕಲ್ಯಾಣಿಗಳಿಂದ ತುಂಬಿ ಬಯೋ-ಜಿಯೋ-ಹೈಡ್ರೋ ಪಾರ್ಕ್ ಆಗಿದೆ. ದೊಡ್ಡ ಆಲದ ಮರ ನಾಶವಾಗುವ ಸ್ಥಿತಿ ತಲುಪಿದ್ದೂ ನಮಗೆ ನಾವೇ ಮಾಡಿಕೊಂಡ ಅನ್ಯಾಯ. ಅಲ್ಲಿ ಹೋಗಿ ಘಳಿಗೆ ಕೂತು ಬರುವುದೇ ಆನಂದದಾಯಕವಾಗಿತ್ತು. ಈಗ ಇದರ ಅನುಭವ ನಮ್ಮ ಸಂತತಿಗೆ ಇಲ್ಲವಾಗಿದೆ. ವಿದೇಶಗಳಲ್ಲಿ ಇಂತಹ ಅದ್ಭುತ ಅನನ್ಯಗಳನ್ನು ನೋಡಿ ಬರಲು ಹೋಗಬೇಕಾಗಿದೆ. ವೃಷಭಾವತಿಯಲ್ಲಿ ಬೊಗಸೆ ನೀರು ಕುಡಿಯುತಿದ್ದ ಬೆಂಗಳೂರಿಗರು , ಅದರ ದುಸ್ಥಿತಿ ನಮ್ಮ ದಾರಿದ್ರ್ಯದ ಸಂಕೇತವಾಗಿದೆ. ಇವುಗಳ ರಕ್ಷಣೆಯಲ್ಲಿ ಸೋತಿದ್ದೇವೆ. ನಮ್ಮ ಮಕ್ಕಳು ನಮ್ಮನ್ನು ಕ್ಷಮಿಸುವುದಿಲ್ಲ.

ಮನನೊಂದ ಡಾ.ಯಲ್ಲಪ್ಪ ರೆಡ್ಡಿ ಅವರು ತಮ್ಮ ಬಯೋ ಪಾರ್ಕ್ ನಿರ್ಮಾಣಕ್ಕೆ ಮೆಚ್ಚಿ ನೀಡಿದ್ದ ಗೌರವ ಡಾಕ್ಟರೇಟ್ ಪದವಿಯನ್ನು ವಾಪಸ್ ನೀಡಿರುವುದು ದುರಂತ. ಅವರನ್ನು ವಿವಿ ಬಯೋ ಪಾರ್ಕ್ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಸ್ಥಾನದಿಂದಲೂ ತೆಗೆದಿರುವುದು ವಿಸಾದನಿಯ.

ಇಂತಹ ಹಸಿರು ಮತ್ತು ಉಸಿರು ಹಾಗೂ ನೀರಿನ ನೆಲೆಯ ಕಣಿವೆಗಳು ಪ್ರಾಣದಾಯಕ ಆಗಿ ಉಳಿಯಲೇ ಬೇಕಾಗಿದೆ. ಇದು ಎಲ್ಲಾ ಬೆಂಗಳೂರಿಗರ ಬೇಡಿಕೆ. ಅವರೆಲ್ಲರ ಪರವಾಗಿ ಪ್ರಾ. ರೇಣುಕಾ ಪ್ರಸಾದ್ ರವರು ಮುಖ್ಯ ಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಬಯೋ ಡೈವರ್ಸಿಟಿ ಮಂಡಳಿ ಅಧ್ಯಕ್ಷರು ಮುಂತಾಗಿ ಜ್ಞಾನ ಭಾರತಿ ಬಯೋ-ಜಿಯೋ-ಹೈಡ್ರೋ ಆವರಣದ ಮಾಹಿತಿ ನೀಡಿ ಉಳಿಸಲು ಕೋರಿದ್ದಾರೆ. ಸುಮಾರು ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಉಳಿಸಿ ಪ್ರಾಣವಾಯು ಎಂಬ ಅಭಿಯಾನಕ್ಕೆ ಸಹಿ ಮಾಡಿದ್ದಾರೆ (ಮಿಂಚಂಚೆ, change.org ಮೂಲಕ). ಸಂಬಂಧಿಸಿದವರ ಗಮನ ಸೆಳೆದಿದ್ದಾರೆ.

ಈ ಎಲ್ಲಾ ಅಂಶಗಳನ್ನು ಪ್ರದಾನ ಮಂತ್ರಿಗಳು, ಮುಖ್ಯ ಮಂತ್ರಿಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಹಲವಾರು ಗಣ್ಯರನ್ನು ಗಮನಕ್ಕೆ ತರುವುದು ಇಂದಿನ ಅವಶ್ಯಕತೆಯನ್ನು ಹಾಗೂ ಮಾಡಲೇಬೇಕಾದ ಕೆಲಸವನ್ನು ಮನಗಾಣಿಸಲಾಗಿದೆ.

ಈ ಎಲ್ಲಾ ಕೆಲಸ ದಾನಿಗಳಿಂದ ಮಾತ್ರ ಮಾಡುವಲ್ಲಿ ರೇಣುಕಾ ಪ್ರಸಾದ್ ಯಶಸ್ಸು ಗಳಿಸಿದವರೆಂದು ಮತ್ತು ದಾನಿಗಳ ವಿವರ ವಿವಿಗೆ ನೀಡಿ ಎಲ್ಲರೊಂದಿಗೆ ಹಂಚಿಕೊಂಡಿದ್ದಾರೆ. ಕೆಲವರು ಜ್ಞಾನ ಭಾರತಿ ವಾಯುವಿಹಾರಿಗಳ ಸಂಘದ ಮೂಲಕ ಗಿಡ ನೆಟ್ಟು ಬೆಳೆಸಲು ಕೋರಿ ಸಂಘಕ್ಕೆ ಹಣ ನೀಡಿ ರಶೀತಿ ಪಡೆದಿದ್ದಾರೆ. ಆ ಹಣದಲ್ಲಿ ಬೋರ್ವೆಲ್ ರಿಪೇರಿ, ಕಳೆ ತೆಗೆಯುವ ಕೆಲಸ ಹಾಗೂ ಶಾಲಾ ಕಾಲೇಜು ಮಕ್ಕಳು ಶ್ರಮದಾನಕ್ಕೆ ಬಂದಾಗ ತಿಂಡಿ ಊಟದ ವ್ಯವಸ್ಥೆ ಮಾಡುತ್ತಿರುವುದು ಪ್ರಶಂಸನೀಯ..

ಇತರೇ ಸಂಸ್ಥೆಗಳಿಗೆ ನೆಪವೊಡ್ಡಿ ಕಾಂಕ್ರೀಟಿಕರಣ ಮಾಡಿ ಜೈವಿಕ ವೈವಿಧ್ಯ ವನ ಹಾಳು ಮಾಡಲು ಹೊರಟಿರುವುದು ಖಂಡನೀಯ. ಇದನ್ನು ಕೇವಲ ಗಳಿಕೆ ಮತ್ತು ವಶೀಲಿಗಾಗಿಯೇ ಎಂದು ತಿಳಿಯಲು ಯಾವುದೇ ತಂತ್ರ ಯಂತ್ರಗಳ ಆವಶ್ಯಕತೆ ಇರುವುದಿಲ್ಲ. ಸಾರ್ವಜನಿಕರಿಗೆ ಎಲ್ಲವೂ ಅರ್ದವಾಗುವುದು. ಪ್ರಾಣವಾಯು ಹಾಗೂ ಗುಟುಕು ನೀರಿಗೇ ಸಂಚಕಾರ ಆಗುತ್ತಿದೆ. ದಯವಿಟ್ಟು ನೀವು ಮನಸ್ಸು ಮಾಡಿ ಈ ದುರಂತ ತಪ್ಪಿಸಿ. ನರಹತ್ಯೆಗೆ ಸಮವಾಗುವ ಕೆಲಸ ಬೇಡವಾಗಿದೆ. ಈ ಪುಣ್ಯಧಾಮ ಉಳಿಸಿ ಪುಣ್ಯ ಕಟ್ಟಿಕೊಳ್ಳಿ. ಚರಿತ್ರೆಯಲ್ಲಿ ನಿಮ್ಮ ಹೆಸರು ಅಮರವಾಗಿರುತ್ತದೆ.

ಇತ್ತೀಚೆಗೆ ಬಯೋ ಪಾರ್ಕ್ ನಾಶ ಮಾಡಿ ಕಟ್ಟಡ ನಿರ್ಮಾಣಕ್ಕೆ ನೋಂದಣಿ ಆಗಿರುವುದನ್ನು ರದ್ದು ಪಡಿಸಿ ಆ ಕಾರ್ಯಗಳನ್ನು ಬೇರೆಡೆಗೆ ವರ್ಗಾಯಿಸುವಂತೆ ಘನ ಸರ್ಕಾರ ಆಜ್ಞೆ ಮಾಡುವಂತೆ ತಮ್ಮಲ್ಲಿ ಪ್ರಾರ್ಥಿಸುತ್ತೇವೆ.

- **ನೊಂದ** ಬೆಂಗಳೂರಿಗರು

| Sl No. | Name | Aadhaar No | Phone No | Signature |
|---|---|---|---|---|
| | | | | |